REGD.NEWS PAPER RNI 50347/1989
RNI.Reg.No.KA/BGGPO/2516/2021-23
Licenced to post without Pre-payment
Registered Regn.No. PMG/BG/WPP-CO -1 /2021-2023
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ



ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : 36 ಜುಲೈ 2023 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 07

ಅಧ್ಯಕ್ಷರ ನುಡಿ

## ಉದ್ಯೋಗಸ್ಥ ಮಹಿಳೆ - ಸವಾಲುಗಳು

**ಮದುವೆಯ ಮೂರುಗಂಟು ಎಂದೆಂದಿಗೂ ಏಳೇಳು ಜನ್ಮದ ನಂಟು ಮದುವೆಯು ಒಂದು ಸುಂದರವಾದ ಬಂಧನ, ಒಬ್ಬರನೊಬ್ಬರು ಅರಿತರೆ ನಡೆಸಬಹುದು ಸುಂದರವಾದ ಜೀವನ.**

ಮದುವೆ ಎನ್ನುವ ಸಂಭ್ರಮ ಸಾಮಾನ್ಯವಾಗಿ ಪ್ರತಿಯೊಬ್ಬರ ಜೀವನದಲ್ಲಿ ಬರುವ ಸುಂದರವಾದ, ಸಂತೋಷವಾದ ಘಟನೆ. ಅಂತಹ **ಪವಿತ್ರ ಗೃಹಸ್ತಾಶ್ರಮ ಅರಿತು ನಡೆದರೆ–ಜೀವನ ಸುಂದರ ಅರಮನೆ, ತಾಳ ತಪ್ಪಿದರೆ ಜೀವನವೆಲ್ಲಾ ದುಃಖದ ಸೆರೆಮನೆ.** ಮದುವೆ ಎರಡು ಹೃದಯಗಳ ಬಂಧನ, ಮನಸ್ಸುಗಳ ಸಮ್ಮಿಲನ. ಹುಡುಗ–ಹುಡುಗಿ, ಮದುವೆ ಆದ ತಕ್ಷಣ ಗಂಡು–ಗಂಡನಾಗಿ, ಹೆಣ್ಣು–ಹೆಂಡತಿಯಾಗಿ ಪರಸ್ಪರ ಪ್ರೀತಿ ವಿಶ್ವಾಸಗಳೊಂದಿಗೆ ನಡೆಸಿದರೆ ಜೀವನ ಉದಯವಾಗುವುದು ಸಂಭ್ರಮದ ಕ್ಷಣ. ವಿಪರ್ಯಾಸವೆಂದರೇ, **ಮದುವೆ ಎನ್ನುವುದು ಸಂಪ್ರದಾಯದ ಧಾರ್ಮಿಕ ಆಚರಣೆ ಆಗುವ ಬದಲಿಗೆ, ಪೋಟೋ ಶೂಟ್‌ಗಳದೇ ಕಾರುಬಾರಾಗಿ, ಅಡಂಬರದ ಆಚರಣೆಗಳಾಗಿ ಇಂದು ಮದುವೆ ಶಾಸ್ತ್ರ ಎನ್ನುವುದೇ ಅರ್ಥ ಕಳೆದುಕೊಳ್ಳುವ ಹಂತಕ್ಕೆ ತಲುಪಿದೆ.**

**ಧರ್ಮೇಚ, ಅರ್ಥೇಚ, ಕಾಮೇಚ** ಎಂದು ಪರಸ್ಪರ ಅರಿತು ಬಾಳಬೇಕಾದ ದಂಪತಿಗಳ ಜೀವನ ಎತ್ತ ಸಾಗಿದೆ...? ಭಾವಿ ದಂಪತಿಗಳು ಮದುವೆಗೆ ಮೊದಲೇ ಊರೂರು ಸುತ್ತಿ, ಮೊಬೈಲ್‌ಗಳ ತುಂಬಾ ಚಿತ್ರ ವಿಚಿತ್ರವಾದ ತಮ್ಮ ಪೋಟೋಗಳನ್ನೇ ತುಂಬಿಕೊಂಡು ಸ್ವರ್ಗಕ್ಕೇ ಮೂರೇ ಗೇಣು ಎಂದು ಸಂಭ್ರಮಿಸುವ ಯುವ ಜೋಡಿಗಳು, ಮದುವೆ ನಂತರ ದಂಪತಿಗಳಾಗಿ ಬಾಳಿ ಬೆಳಗ ಬೇಕಾದವರು ಎಷ್ಟು ಮಾತ್ರ ಅರ್ಥ ಪೂರ್ಣ ದಾಂಪತ್ಯ ಜೀವನದಲ್ಲಿ ಸುಖ, ಶಾಂತಿಗಳನ್ನು ಹೊಂದಿದ್ದಾರೆ...? ಅದರಲ್ಲೂ **ನನಗೆ ಕೆಲಸಕ್ಕೆ ಹೋಗುವ ಹುಡುಗಿ ಬೇಕು, ಓದಿರುವ ಹುಡುಗಿಯೇ ಬೇಕು, ನನ್ನ ವೃತ್ತಿಯನ್ನೇ ಮಾಡುವ ಹುಡುಗಿ/ಹುಡುಗ ಬೇಕು, ನನ್ನ ವ್ಯಾಪಾರ/ವೃತ್ತಿಗಳಿಗೆ ಸಹಕಾರ ನೀಡುವ ಹುಡುಗ/ಹುಡುಗಿ ಬೇಕು** ಇತ್ಯಾದಿ ಆಶೋತ್ತರಗಳೊಂದಿಗೆ ಹುಡುಕಿ, ಹುಡುಕಿ ಮದುವೆ ಅದ ಬಳಿಕ ಜೀವನವನ್ನು ಸುಂದರವಾಗಿ ನಡೆಸಿ ಕೊಳ್ಳಬೇಕಲ್ಲವೇ? ಅದರಲ್ಲೂ ದುಡಿಯುವ ಹೆಣ್ಣು ಸಿಕ್ಕ ಮೇಲಂತೂ ಹುಡುಗರು ಇನ್ನೂ ಚೆನ್ನಾಗಿ ಬಾಳ ಬೇಕಲ್ಲವೇ? ಕಾರಣ, **ಹುಡುಗನಿಗೆ, ಹುಡುಗಿಯೂ ಜೊತೆಗೆ ಪ್ರತೀ ತಿಂಗಳು ಆದಾಯ, ಇನ್ನೂ ಅದೃಷ್ಟ ಚೆನ್ನಾಗಿದ್ದರೆ ಮದುವೆ ಮುಂಚೆ ಆಕೆ ಕೂಡಿಟ್ಟಿರುವ ಹಣ, ಹುಡುಗಿಯಿಂದ ಬರಬಹುದಾದ ಚರ–ಸ್ಥಿರ ಆಸ್ತಿಗಳು** ಇತ್ಯಾದಿ ಇತ್ಯಾದಿ, ಇಷ್ಟೆಲ್ಲಾ ಬಂದರೂ... ಇದ್ದರೂ... ಗಂಡ ಹೆಂಡತಿಯರಲ್ಲಿ ಅನ್ಯೋನ್ಯತೆ ಇದ್ದರಷ್ಟೇ, ಬಾಳು ಹುಣ್ಣಿಮೆಯಂತೆ ಕಂಗೊಳಿಸುತ್ತದೆ. **ಅನ್ಯೋನ್ಯತೆ ಬದಲಿಗೆ ಅನುಮಾನ ಶುರುವಾದರೆ ಬಾಳು ಅಮಾವಾಸ್ಯೆಯಂತಾಗುತ್ತದೆ ಅಲ್ಲವೇ...?** ಅದರಲ್ಲಿ ಉದ್ಯೋಗಸ್ಥ ಮಹಿಳೆಯು ತನ್ನ ದಾಂಪತ್ಯ ಜೀವನದಲ್ಲಿ ಎದುರಿಸಬೇಕಾದ ಸವಾಲುಗಳು ಸಾಲು ಸಾಲು. **ಉದ್ಯೋಗಸ್ಥ ಮಹಿಳೆಯರ ಕೌಟುಂಬಿಕ ಜೀವನವೇನೂ ಹೂವಿನ ಹಾಸಿಗೆಯಲ್ಲ.** ಯಾವುದೇ ಪುರುಷರಿಗಿಂತಲೂ ಹೆಚ್ಚು ಆತ್ಮವಿಶ್ವಾಸವನ್ನು, ಹೊಂದಿರುವವಳು ಉದ್ಯೋಗಸ್ಥ ಮಹಿಳೆ. ಗಂಡ, ಮಕ್ಕಳು, ಅತ್ತೆ, ಮಾವ, ಕಛೇರಿ ಕೆಲಸಗಳು ಇದರ ಜೊತೆ ಜೊತೆಗೆ ಆಗ್ಗಿಂದಾಗ್ಗೆ ಸವಾಲಾಗುವ ಕುಟುಂಬದ ಆರೋಗ್ಯ ಸಮಸ್ಯೆಗಳು, ಸಮಯ ಪಾಲನೆಯಂತಹ **ಸವಾಲುಗಳನ್ನು ನಿಭಾಯಿಸಬಲ್ಲೇ ಎಂಬ ಆತ್ಮವಿಶ್ವಾಸ ಒಬ್ಬ ಮಹಿಳೆಗೆ ಮಾತ್ರ ಸಾಧ್ಯ.**

ತನ್ನ ಆರೋಗ್ಯ, ಮಾನಸಿಕ ಒತ್ತಡಗಳು ಏನೇ ಇರಲಿ ಬೆಳ್ಳಂ ಬೆಳಿಗ್ಗೆ ಬೇಗ ಎದ್ದು ಗೃಹ ಕೃತ್ಯಗಳನ್ನು ಮುಗಿಸಿ, ಮನೆ ಮಂದಿಗೆ ಅಡುಗೆ ವ್ಯವಸ್ಥೆ ಮಾಡಿ, ಮಕ್ಕಳಿದ್ದಲ್ಲಿ ಅವರಿಗೆ ಡಬ್ಬಿ ತುಂಬಿ ಕೊಟ್ಟು, ಗಡಿಬಿಡಿಯಲ್ಲಿ ಅರ್ಧಂಬರ್ಧ ತಿಂದು ಕೆಲಸಕ್ಕೆ ಹೊರಡುವ ಉದ್ಯೋಗಸ್ಥ ಮಹಿಳೆಯರಿಗೆ ಗಂಡನಿಂದ ಸಿಗುವ ಬೆಂಬಲ ಅಷ್ಟಕಷ್ಟೇ. **ಕೆಲಸ ಮುಗಿಸಿ ಸಂಜೆ ಮನೆಗೆ ಬರುವ ಹೊತ್ತಿಗೆ ದೇಹ, ಮನಸು ಎಷ್ಟೇ ದಣಿದಿದ್ದರೂ ವಿಶ್ರಾಂತಿಗಾಗಿ ಕುಳಿತು ಕೊಳ್ಳುವಷ್ಟು ಪುರಸೊತ್ತು ಇರುವುದಿಲ್ಲ.** ನಾನಾ ಕಾರಣಗಳಿಂದ ಆಕಸ್ಮಿಕವಾಗಿ ತಡವಾಗಿ ಬಂದರಂತೂ ಮುಗಿದೇ ಹೋಯಿತು, ಗಂಡನ ಗಂಟಿಕ್ಕಿದ ಮುಖದಲ್ಲೇ ಕಾಣುವ ಪ್ರಶ್ನೆಗಳಿಗೆ ಉತ್ತರಿಸುತ್ತಾ, ರಾತ್ರಿ ಅಡುಗೆ ಜೊತೆಗೆ, ಮನೆ ಶುದ್ಧೀಕರಣದ ಕಾರ್ಯ ಆಗಬೇಕು. ಎಲ್ಲರೂ ಊಟ ಮಾಡಿದ್ದು ಆಯಿತು. ಇಷ್ಟೆಲ್ಲಾ ಆದ ಮೇಲೂ ತನಗಾಗಿರುವ ಸುಸ್ತನ್ನು ತೋರಿಸಿಕೊಳ್ಳದೆ ಗಂಡನ ಬಯಕೆಗಳಿಗೂ ಸ್ಪಂದಿಸಬೇಕು. **ದಿನ ಪೂರ್ತಿ, ವರ್ಷ ಪೂರ್ತಿ, ತನ್ನ ಸುಖವನ್ನು ಮರೆತು, ನೋವನ್ನು ಮರೆತು ಕುಟುಂಬಕ್ಕಾಗಿ ಕಾರ್ಯ ನಿರ್ವಹಿಸಬೇಕು.**



ಉದ್ಯೋಗಸ್ಥ ಮಹಿಳೆ ತನ್ನ ಕಛೇರಿಗೆ ಹೋಗಿ ಬರುವ ಪ್ರಯಾಣದ ಸಂದರ್ಭ, ಕೆಲಸದ ಸ್ಥಳದಲ್ಲಿ ಕೆಟ್ಟ ಹಸಿದ ಕಂಗಳ ನೋಟ, ಅಸಹ್ಯಕರ ಸ್ಪರ್ಶಗಳ ಬಗ್ಗೆ ಮನೆಯಲ್ಲಿ ಮಾತನಾಡುವಂತೆಯೇ ಇಲ್ಲ. ಒಂದು ವೇಳೆ ಹೇಳಿಕೊಂಡರೆ ಆದಕ್ಕೆ ಸಿಗುವ ಉತ್ತರ **"ಅದಕ್ಕೇ ಹೇಳಿದ್ದು ಕೆಲಸಕ್ಕೆ ಹೋಗಬೇಡ ಅಂತ, ನೀನು ದುಡಿದು ಯಾರನ್ನು ಸಾಕಬೇಕಿದೆ",** ಇತ್ಯಾದಿ ಅಣುಕು ಅಥವಾ ಕಠೋರ ನುಡಿಗಳಿಗೆ ಆಹ್ವಾನ ನೀಡಿದಂತೆ, ಇಷ್ಟೇ ಹೇಳಿದರೆ ಮುಗಿಯೋಲ್ಲ ಮೊದಲು **ರಾಜೀನಾಮೆ ಕೊಡು ಎಂಬ ಪುಕ್ಕಟೆ ಸಲಹೆ ಕೂಡ ಸಿಗುತ್ತದೆ.**

ಒಂದು ವೇಳೆ ಮಕ್ಕಳಿಗೆ ಆರೋಗ್ಯವಿಲ್ಲ, ಡಾಕ್ಟರ್ ಬಳಿ ಹೋಗಬೇಕು, ಶಾಲೆಯಲ್ಲಿ ಪೋಷಕರ ಸಭೆ, ಮದುವೆ, ಮುಂಜಿಯಂತಹ ಕಾರ್ಯಕ್ರಮಗಳಿಗೆ ಹೋಗಬೇಕಾದಾಗ, ಮನೆಗೆ ಅತಿಥಿಗಳು ಬಂದಾಗ ತನಗೆ ಎಷ್ಟೇ ಕಛೇರಿ ಕೆಲಸದ ಒತ್ತಡವಿದ್ದರೂ ಎಲ್ಲಾ ಕಡೆ, **ಎಲ್ಲಾ ಕೆಲಸಗಳನ್ನು ನಿಭಾಯಿಸುವಂತಹ ಕಲೆಯನ್ನು ಕರಗತ ಮಾಡಿಕೊಂಡಿರುವವಳು ಉದ್ಯೋಗಸ್ಥ ಮಹಿಳೆ.** ಇಷ್ಟೆಲ್ಲಾ ಸಂಯಮದಿಂದ ಕಾರ್ಯ ನಿರ್ವಹಿಸಿದ ನಂತರವೂ ಸಂಸಾರದಲ್ಲಿ ಏನೇ ಜಗಳ ಸಂಭವಿಸಿದರೂ, ಮೊದಲು ಗುರಿಯಾಗುವುದು ಇವಳ ಉದ್ಯೋಗವೇ. ಇನ್ನೂ ಕೆಲವು ಗಂಡಸರಂತೂ ಮತ್ತಷ್ಟು ವಿಪರೀತಕ್ಕೆ ಹೋಗಿ, ಹೆಂಡತಿ ಮನೆಗೆ ಬರುತ್ತಿದ್ದಂತೆ ಆಕೆಯ ಮೊಬೈಲ್ ತೆಗೆದುಕೊಂಡು ಕಾಲ್‌ಗಳು, ವಾಟ್ಸ್‌ಪ್‌ಗಳು, ಮೇಲ್‌ಗಳು, ಫೇಸ್‌ಬುಕ್ ಪರಿಶೀಲಿಸಿ ಅನುಮಾನಗಳಿಂದ, ಕೆಟ್ಟ ಕುತೂಹಲದಿಂದ ಪ್ರಶ್ನೆಗಳ ಸುರಿಮಳೆಗರೆಯುತ್ತಾರೆ ಪ್ರತೀ ಉತ್ತರಕ್ಕೂ ಒಂದೊಂದು ಪ್ರಶ್ನೆ, ಅವಳು ಉತ್ತರ ಕೊಡುತ್ತಲೇ ಇರಬೇಕು. **ಮನೆಯಲ್ಲಿದ್ದಾಗ ಯಾವುದೇ ಕಛೇರಿ ಕೆಲಸಕ್ಕೆ ಫೋನ್ ಬಂದರೆ ಸಾಕು "ಆಫೀಸಿನ ಕೆಲಸವನ್ನು ಮನೆವರೆಗೆ ತರಬೇಡ ಎಂದು ಹೇಳಲಿಲ್ಲವೇ" ಎಂದು ಗಡಸು ಮಾತಿನ, ಉಬ್ಬಿದ ಕಣ್‌ನೋಟ, ಚುಚ್ಚು ಮಾತುಗಳಿಗೆ ಸ್ವಾಗತ ನೀಡುತ್ತದೆ.**

ಮಹಿಳೆ ತನ್ನ ಕಛೇರಿ ಸಹೋದ್ಯೋಗಿಗಳಿಗೆ ಯಾವುದೇ ಸಂತೋಷ ಹಂಚಿಕೊಳ್ಳಲು ಪಾರ್ಟಿಗಳನ್ನು ಕಛೇರಿ ಸಮಯದಲ್ಲೇ ಕೊಟ್ಟುಬಿಟ್ಟರೆ ನಿರಾತಂಕ, ಒಂದು ವೇಳೆ ಕಛೇರಿ ವೇಳೆ ಮುಗಿದ ನಂತರ ಅದೇ ಪಾರ್ಟಿ ಇಟ್ಟುಕೊಂಡಲ್ಲಿ ಮನೆಗೆ ಹೋಗಿ ಸಂಬಾಳಿಸುವುದು ಹೇಗೆ ಎನ್ನುವುದರಲ್ಲೇ ಅವಳ ಶಕ್ತಿ, ಬುದ್ಧಿ ಕುಂದು ಹೋಗಿರುತ್ತದೆ, ಪಾರ್ಟಿಯ ಸಂತೋಷ ಸಂಭ್ರಮಗಳು ಉಳಿಯುವುದೇ ಇಲ್ಲ. ಇನ್ನೂ ಕೆಲವು ಗಂಡಸರು ಹೆಂಡತಿ ತಾನು ಹೋಗಿರುವ ಸ್ಥಳದ ಲೊಕೇಶನ್‌ನನ್ನು ತರಿಸಿಕೊಳ್ಳುತ್ತಾರೆ, **ಇನ್ನೂ ಕೆಲವು ಆಷಾಡಭೂತಿಗಳು ಹೆಂಡತಿಯ ಓಡಾಟದ ಮೇಲೆ ಅನುಮಾನ ಎಂಬ ಹದ್ದಿನ ಕಣ್ಣಿರಿಸಿ, ಹೆಂಡತಿಯ ಮೊಬೈಲ್‌ನಲ್ಲಿ ಗೂಗಲ್ ಲೊಕೇಶನ್‌ನನ್ನು ಸಿಂಕ್ ಮಾಡಿ ಅವಳ ಚಲನ ವಲನಗಳ ಮೇಲೆ ನಿಗಾ ಮಾಡುತ್ತಾ, ಅನುಮಾನ ಎಂಬ ಗಿಡವನ್ನು ಮರವನ್ನಾಗಿ ಮಾಡಿಕೊಂಡುಬಿಡುತ್ತಾರೆ.** ತನ್ನ ಹೆಂಡತಿ ಯಾರನ್ನು ನಗು ನಗುತ್ತಾ ಮಾತನಾಡಿಸಿದರೂ ಕಷ್ಟ, ಯಾರಾದರೂ ತನಗೆ ಆಪ್ತರಾದವರಿಗೆ **ನಿಮ್ಮನ್ನು ಕಂಡರೆ ನನಗೆ ಇಷ್ಟ** ಎಂದು ಹೇಳಿದರೆ ಮುಗಿದೇ ಹೋಯಿತು. **ಇವಳಿಗೆ ನರಕ ದರ್ಶನ ಪ್ರಾಪ್ತಿಯಾಗಿಬಿಡುತ್ತದೆ.** ಇನ್ನೂ ಕೆಲವರಲ್ಲಿ ಹೆಂಡತಿಯ ಓದು/ನೌಕರಿ ಹೆಚ್ಚಾಗಿದ್ದು, ಜನಸಂಪರ್ಕವೂ ಹೆಚ್ಚಾಗಿದ್ದರೆ ಪ್ರತಿನಿತ್ಯ ಅವಮಾನ, ಅವಹೇಳನ ಕಟ್ಟಿಟ್ಟ ಬುತ್ತಿ. ಇದು ಕೇವಲ ಒಂದೆರೆಡು ಹೆಣ್ಣು ಮಕ್ಕಳ ಕಥೆಯಲ್ಲ, ಕೆಲವು ಹೊರಗಿನ ಪ್ರಪಂಚಕ್ಕೆ ಗೋಚರವಾಗುತ್ತದೆ. ಇನ್ನೂ ಕೆಲವು ಅಂತರಂಗದಲ್ಲೇ ಕುದಿಯುತ್ತಾ ಯಾವತ್ತೋ ಒಂದು ದಿನ ಅಸ್ವಾಭಾವಿಕ ಸಾವಿನಲ್ಲಿ ಕೊನೆಗೊಳ್ಳುತ್ತದೆ.

ಈ ನೆಲದ ಕಾನೂನು, ಸಂವಿಧಾನವು ಗಂಡು ಹೆಣ್ಣಿಗೆ ಸರಿಸಮಾನವಾದ ಸಮಾನತೆ ನೀಡಿದ್ದರೂ ಸಹ, ವಾಸ್ತವಿಕ ಪ್ರಪಂಚದಲ್ಲಿ ಇಂದಿಗೂ ಲಕ್ಷ ಲಕ್ಷ ಉದ್ಯೋಗಸ್ಥ ಮಹಿಳೆಯರಿಗೆ ಮಾತ್ರ ಸಮಾನತೆ ಎನ್ನುವುದು ಮರೀಚಿಕೆಯಾಗಿದೆ. **ಪ್ರತಿಯೊಬ್ಬ ಗಂಡಸು ತನ್ನ ಹೆಂಡತಿಯ ಬಗ್ಗೆ ತೋರಿಕೆಯ ಪ್ರೀತಿ ಬಿಟ್ಟು ಅಂತರಂಗದಿಂದ ಪ್ರೀತಿಯನ್ನು ನೀಡಲಿ, ಅವಳ ಜೊತೆ ಅನುಮಾನದ ಬಾಳ್ವೆಯ ಬದಲು ಅನ್ಯೋನ್ಯತೆ ಬಾಳನ್ನು ನೀಡಿದರೆ ಸಾಕು, ಮನೆ ಬೆಳಗುವ ಹೆಣ್ಣು ಮನೆತನವನ್ನು ಬೆಳುಗುತ್ತಾಳೆ.**

(ಅಧ್ಯಕ್ಷರ ನುಡಿಯ ಕೆಲವು ಅಂಶಗಳನ್ನು ಬೇರೆ ಲೇಖನಗಳಿಂದ ಸಂಗ್ರಹಿಸಲಾಗಿದೆ)

**ರಾ ಪ ರವಿಶಂಕರ್**, ಅಧ್ಯಕ್ಷರು

# ವಾಸವಿ ಭವನ

## ಒಂದು ಭವನವಷ್ಟೇ ಅಲ್ಲ.. ಅದೊಂದು ಬಹುಪಯೋಗಿ ಕೇಂದ್ರ





ಪೂಜ್ಯಶ್ರೀಗಳು ಹಾಗೂ ಇತರ ಗಣ್ಯ ಆಹ್ವಾನಿತರಿಂದ ಉದ್ಘಾಟನೆಯಾಗುತ್ತಿರುವ ವಾಸವಿ ಭವನ

ಮೈಸೂರು ಎಂಬುದು ಮಲ್ಲಿಗೆಯ ಕಂಪನು ಬೀರುತ, ಮೈಸೂರು ಪಾಕವ ಸವಿಯುತ, ಅರಮನೆಗಳ ನೋಡುತ, ಚಾಮುಂಡಿಯ ಪಾದದಿ ಕೂರುತ, ಆಕಾಶವಾಣಿಯ ಗೀತವ ಕೇಳುತ, ಕಾರಂಜಿಯಲ್ಲಿ ತೇಲುತ, ಕಾವೇರಿಯ ಮಡಿಲಲ್ಲಿ ಆಡುತ ............... ಹೀಗೆ ಹೇಳಲು ಹೋದರೆ ಪುಟಗಳೇ ಸಾಲದು.

ತನ್ನ ಕ್ರಿಯಾಶೀಲ ಸೇವಾ ಕಾರ್ಯಕ್ರಮಗಳ ಮೂಲಕ ಜನಮನಕ್ಕೆ ಹತ್ತಿರವಾದ ಮಹಾಸಭೆಯ ಸೇವೆಗಳನ್ನು ಗುರುತಿಸಿ ಅಂದಿನ ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1927ರಲ್ಲಿ, ಬೆಂಗಳೂರು ನಗರದ ಹೃದಯ ಭಾಗದಲ್ಲಿ ಅಂದರೆ ನಂ.16 ಶೇಷಾದ್ರಿ ರಸ್ತೆಯಲ್ಲಿ 52,000 ಚ.ಅಡಿಗಳ ಜಾಗವನ್ನು ಮತ್ತು ಆರ್ಯವೈಶ್ಯ ವಿದ್ಯಾರ್ಥಿ ನಿಲಯದ ನಿರ್ಮಾಣಕ್ಕಾಗಿ ರೂ.10000/–ಗಳ ಅನುದಾನವನ್ನು ನೀಡಿ ಸಮಾಜದ ಅಭಿವೃದ್ಧಿಗೆ ಆಶೀರ್ವದಿಸಿದರು. ಅದೇ ಜಾಗದಲ್ಲಿ ಇಂದು ಪಂಚತಾರ ಹೊಟೆಲ್‌ನೊಂದಿಗೆ ಉನ್ನತ ವ್ಯಾಸಂಗ ಮಾಡುತ್ತಿರುವ 120 ವಿದ್ಯಾರ್ಥಿಗಳಿಗೆ ಇಂದಿಗೂ ಹಾಸ್ಟೆಲ್ ಸೌಲಭ್ಯ ಇದ್ದು, ಇಲ್ಲಿಯವರೆವಿಗೂ ಸಾವಿರಾರು ವಿದ್ಯಾರ್ಥಿಗಳಿಗೆ ಭವ್ಯ ಭವಿಷ್ಯ ನೀಡಿದೆ, ನೀಡುತ್ತಾ ಬಂದಿದೆ.

ಇಷ್ಟೇ ಸಾಕೇ ........ ಸಾಲದು ಎಂಬಂತೆ ನಿರ್ಧರಿಸಿದ ಮಹಾಸಭೆಯು ತನ್ನ ಸೇವಾ ಕ್ಷೇತ್ರವನ್ನು ಬೆಂಗಳೂರಿಗೆ ಸೀಮಿತಗೊಳಿಸದೆ ರಾಜ್ಯದ ಹಲವು ಭಾಗಗಳಲ್ಲಿ ನೆಲೆಯೂರಬೇಕು ಎಂಬ ಆಶಯ ವ್ಯಕ್ತವಾಗುತ್ತಿತ್ತು. ಸೇವಾಕ್ಷೇತ್ರದ ವ್ಯಾಪ್ತಿಯು ವಿಕೇಂದ್ರಿಕರಣಗೊಳ್ಳಬೇಕು ಎಂದು ನಿರ್ಧರಿಸಿತು. ಇಂತಹ ಸಂದರ್ಭದಲ್ಲಿ ಮಹಾಸಭೆಯು ಕಳೆದ 10 ವರ್ಷಗಳ ನಿರಂತರ ಚಟುವಟಿಕೆಗಳು ಹಾಗೂ ಸಮಾಜ ಸೇವಾ ಕಾರ್ಯಗಳನ್ನು ಗಮನಿಸಿದ ಮೈಸೂರಿನ ಹೆಸರಾಂತ ಟ್ರಸ್ಟ್‌ಗಳಲ್ಲಿ ಒಂದಾದ ಚೌಧರಿ ಅಪ್ಪಾಜಯ್ಯ ಶೆಟ್ಟಿ ಧರ್ಮಛತ್ರ ಹಾಗೂ ಉಚಿತ ವಿದ್ಯಾರ್ಥಿನಿಲಯ ಟ್ರಸ್ಟ್ ಮಹಾಸಭೆಯ ಜೊತೆಯಲ್ಲಿ ಮಹಾಸಭೆಯ ಉದ್ದೇಶದಲ್ಲಿ ಕೈಜೋಡಿಸುವ ತೀರ್ಮಾನವಾಯಿತು. ಎರಡು ಸಂಸ್ಥೆಯ ಮುದ್ದಿನ ಮಗುವಾಗಿ ಇಂದು "ವಾಸವಿ ಭವನ" ಬೆಳೆದು ನಿಂತಿದೆ.

ವಿಶ್ವ ಪ್ರಸಿದ್ಧ ಪ್ರವಾಸಿತಾಣ ಮೈಸೂರು, ಇಂದು ಶಿಕ್ಷಣ ಕಾಶಿಯಾಗಿಯೂ ಬೆಳೆಯುತ್ತಿದೆ, ರಾಜ್ಯದ ನಾನಾ ಭಾಗಗಳಿಂದ ಮೈಸೂರು ನಗರದಲ್ಲಿ ಉನ್ನತ ವ್ಯಾಸಂಗವನ್ನು ಅರಸಿ ಬರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಉತ್ತಮವಾದ, ಆಧುನಿಕ ಸೌಲಭ್ಯಗಳನ್ನುಳ್ಳ ವಸತಿ ವ್ಯವಸ್ಥೆಯ ಕೊರತೆಯಿದ್ದುದನ್ನು ಮನಗಂಡ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಮೈಸೂರು ನಗರದ ಪ್ರತಿಷ್ಠಿತ ಟ್ರಸ್ಟ್‌ಗಳಲ್ಲಿ ಒಂದಾಗಿರುವ ಚೌಧರಿ ಅಪ್ಪಾಜಯ್ಯ ಶೆಟ್ಟರ್ ಧರ್ಮಛತ್ರ ಹಾಗೂ ಉಚಿತ ವಿದ್ಯಾರ್ಥಿನಿಲಯದ ಆಡಳಿತ ವರ್ಗದವರೊಂದಿಗೆ ಚರ್ಚಿಸಿ ಮನವೊಲಿಸಿ ಮೈಸೂರು ನಗರದ ಹೃದಯ ಭಾಗದಲ್ಲಿ ಅಂದರೆ ಗೀತಾಮಂದಿರ ರಸ್ತೆಯಲ್ಲಿರುವ ಸದರಿ ಟ್ರಸ್ಟಿನ ಜಾಗದಲ್ಲಿ ಸುಮಾರು 7500 ಚ.ಅಡಿಗಳ ವಿಸ್ತೀರ್ಣವುಳ್ಳ ಜಾಗವನ್ನು ದೀರ್ಘಾವಧಿ ಗುತ್ತಿಗೆಗೆ ಪಡೆದುಕೊಂಡು ದಿನಾಂಕ 30–08–2020ರಂದು ವಿದ್ಯಾರ್ಥಿಗಳ ಹಾಸ್ಟೆಲ್, ಅತಿಥಿಗೃಹಗಳು, ಮತ್ತು UPSC, KPSC ಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಿ, ಗುಣಮಟ್ಟದ ಶಿಕ್ಷಣದೊಂದಿಗೆ ಉತ್ತಮ ಮಾರ್ಗದರ್ಶನ ನೀಡುವ ವಿಶೇಷ ಯೋಜನೆಗೆ ಭೂಮಿ ಪೂಜೆ ಮೂಲಕ ಅಂಕುರಾರ್ಪಣೆ ಮಾಡಿತು.

ಕೊರೋನ ಸಾಂಕ್ರಾಮಿಕ ಹಿನ್ನೆಲೆಯಲ್ಲಿ ಯೋಜನೆ ಲೋಕಾರ್ಪಣೆ ಸುಮಾರು ಒಂದೂವರೆ ವರ್ಷ ತಡವಾಯಿತು. ದಿನಾಂಕ 25–6–2023ರಂದು ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಗೃಹಪ್ರವೇಶ ವಿಧಿವಿಧಾನಗಳನ್ನು ಪೂರೈಸಿದ ಮಹಾಸಭೆ ದಿನಾಂಕ 24–6–2023 ರ ಭಾನುವಾರ ಸುಸಜ್ಜಿತವಾದ, ಸುಂದರವಾದ ಬಹುಪಯೋಗಿ ವಾಸವಿಭವನ ಲೋಕಾರ್ಪಣೆ ಮಾಡಿತು ಎಂದು ತಿಳಿಸಲು ಸಂತೋಷವಾಗುತ್ತದೆ.

ರಾಜ್ಯದಲ್ಲಿ ಮಹಾಸಭೆಯ ವತಿಯಿಂದ ಹಲವು ಯಶಸ್ವಿ ಯೋಜನೆಗಳಾದ ಸಂಧ್ಯಾಶ್ರೀ, ವಾಸವಿ ಚೇತನ, ವಿದ್ಯಾರ್ಥಿ ಮಿತ್ರ, ವಿದ್ಯಾ ನಿಧಿ, ಅಮರ ಜ್ಯೋತಿ, ವಾಸವಿ ಅಕಾಡೆಮಿಯಂತಹ ಯೋಜನೆಗಳೊಂದಿಗೆ ಸೇರಿಕೊಳ್ಳುತ್ತಿದೆ. ಗೋಶಾಲೆ, ಅನಾಥಾಶ್ರಮ, ವೃದ್ಧಾಶ್ರಮ, ವಿದ್ಯಾರ್ಥಿ ನಿಲಯದಂತಹ ಸರಣಿಯ ಜೊತೆಯಲ್ಲಿ 'ವಾಸವಿ ಭವನ' ಮತ್ತೊಂದು ಕೊಂಡಿಯಾಗಿ ಸೇರಿಕೊಂಡಿದೆ. ಇದರೊಂದಿಗೆ ರಾಜ್ಯಾಧ್ಯಕ್ಷರಾದ ಸಾಧನೆಗಳ ಸರಮಾಲೆಗಳ ಸರದಾರ, ಅಭಿವೃದ್ಧಿಯ ಹರಿಕಾರ ಶ್ರೀಯುತ ಆರ್.ಪಿ. ರವಿಶಂಕರ್‌ರವರ ಮತ್ತೊಂದು ಕನಸು ನನಸಾಗುತ್ತಿದೆ.

'ವಾಸವಿ ಭವನ'ವು ಮೈಸೂರಿನ ಹೃದಯ ಭಾಗದಲ್ಲಿರುವ ಗೀತಾಮಂದಿರ ರಸ್ತೆಯಲ್ಲಿ ನಿರ್ಮಾಣವಾಗಿದ್ದು 7500 ಚದರ ಅಡಿಗಳ ಭೂಮಿಯಲ್ಲಿ 19000 ಚದರ ಅಡಿಗಳಷ್ಟು ಕಟ್ಟಡವನ್ನು ಹೊಂದಿದೆ. ಸಾಮಾನ್ಯವಾಗಿ ಹಾಸ್ಟೆಲ್‌ಗಳನ್ನು ಕಟ್ಟುವಾಗ ಎಲ್ಲರೂ ಮಿತವಾಗಿ ಹಾಗೂ ಸರಳವಾಗಿ ಕಟ್ಟಲು ಬಯಸುತ್ತಾರೆ. ಆದರೆ ದೂರದೃಷ್ಟಿ, ವ್ಯಾಸಾಂಗದ ವಾತಾವರಣ ಹಾಗೂ ಈಗಿನ ಪೀಳಿಗೆಯ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಕ್ಷರಾದಿಯಾಗಿ ಮಹಾಸಭೆಯ ಆಡಳಿತ ಮಂಡಳಿ ಹಾಗೂ ಕಾರ್ಯಕಾರಿ ಸಮಿತಿಯು ಅತ್ಯಂತ ಉದಾರತೆಯಿಂದ ಸುಸಜ್ಜಿತವಾದ, ವ್ಯವಸ್ಥಿತವಾದ, ಭವ್ಯವಾದ ಹಾಸ್ಟೆಲ್‌ನ್ನು ಜನಾಂಗದ ಹಾಗೂ ನಾಗರೀಕ ಸೇವೆಗಾಗಿ ಲೋಕಾರ್ಪಣೆ ಮಾಡಲಾಗಿದೆ. ಅಂದಾಜು 8 ಕೋಟಿ ರೂಪಾಯಿಗಳ ಈ ಕಟ್ಟಡ ಮಹಾಸಭೆಯ ಮುಕುಟದಲ್ಲಿರುವ ಮತ್ತೊಂದು ಮಣಿಯಾಗಿದೆ.

ವಾಸವಿ ಭವನವನ್ನು ದಿನಾಂಕ 25.06.2023ರ ಭಾನುವಾರದಂದು ಶ್ರೀವಾಸವಿ ಪೀಠದ ಪರಮ ಪೂಜ್ಯರಾದ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮಿಯವರು ತಮ್ಮ ಅಮೃತ ಹಸ್ತದಿಂದ ಸೇವಾ ಜ್ಯೋತಿಯನ್ನು ಬೆಳಗುವುದರ ಮೂಲಕ ಜ್ಞಾನಜ್ಯೋತಿಯನ್ನು ಬೆಳಗುತ್ತಾರೆ. ಜೊತೆಗೆ 'ವಾಸವಿ ಭವನ'ದ ಉದ್ಘಾಟನೆಯನ್ನು ವಾಸವಿ ಮಾತೆಯ ಹೆಮ್ಮೆಯ ಪುತ್ರರೂ, ರಾಜ್ಯ ರಾಜಕೀಯ ಕ್ಷೇತ್ರದ ಭೀಷ್ಮ ಎಂದು ಕರೆಯುವ ಮಾಜಿ ಶಿಕ್ಷಣ ಸಚಿವರೂ ಆದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ಭವನದ ಉದ್ಘಾಟನೆ ಮಾಡುತ್ತಾರೆ. ಈ ಕಾರ್ಯಕ್ರಮದಲ್ಲಿ ಶಾಸಕರುಗಳಾದ ಶ್ರೀ ಹರೀಶ್‌ಗೌಡ ಮತ್ತು ಶ್ರೀ ಶ್ರೀವತ್ಸರವರು ಹಾಗೂ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್. ಅರುಣ್‌ರವರು ಸಹ ಪಾಲ್ಗೊಂಡು ಉದ್ಘಾಟನಾ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟಿರುತ್ತಾರೆ.

ವಾಸವಿ ಭವನದ ಉದ್ಘಾಟನಾ ಸಮಾರಂಭದ ಹಿನ್ನಲೆಯಲ್ಲಿ ಮೈಸೂರು ನಗರ ಆರ್ಯವೈಶ್ಯ ಕಲಾವಿದರಿಂದ ಕರ್ನಾಟಕ ಕಲಾಮಂದಿರದಲ್ಲಿ ವರ್ಣರಂಜಿತವಾದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ವಿವಿಧ ಭಾಗಗಳಿಂದ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಹಸ್ರಾರು ಸಂಖ್ಯೆಯ ಕುಲಬಾಂಧವರಿಂದ ಸಭಾಂಗಣ ತುಂಬಿ ತುಳುಕಿತ್ತು, ಸಭಾಂಗಣದಲ್ಲಿ ನಿಂತು ನೋಡಲು ಸಹ ಕಷ್ಟವಾಗುವಂತಹ ಜನಸಂದಣಿ ಆಯೋಜಕರ ಶ್ರಮಕ್ಕೆ ಸಾರ್ಥಕತೆ ತಂದಿತ್ತು.



ವೇದಿಕೆಯಲ್ಲಿ ಮೂಡಿ ಬಂದ ವಿಭಿನ್ನ ಸಾಂಸ್ಕೃತಿಕ ಕಾರ್ಯಕ್ರಮಗಳು


ವೇದಿಕೆಯಲ್ಲಿ ಉಪಸ್ಥಿತರಿರುವ ಗಣ್ಯರು

ಬೆಳ್ಳಂ ಬೆಳಗ್ಗೆ 8.00 ಘಂಟೆಯಿಂದಲೇ ಆಗಮಿಸುತ್ತಿದ್ದ ಬಂಧುಗಳಿಗೆ ಬೆಳಗಿನ ಉಪಹಾರ, ಮಧ್ಯಾಹ್ನದ ಊಟೋಪಚಾರಗಳನ್ನು ಬಹಳ ಅಚ್ಚುಕಟ್ಟಾಗಿ ಏರ್ಪಡಿಸಲಾಗಿತ್ತು. ವಾಸವಿ ಭವನದ ಯಶಸ್ಸಿಗೆ ಹರಸಲು ಆಗಮಿಸಿದ್ದ ಸಾವಿರಾರು ಕುಲಭಾಂದವರಿಗೆ ಅತ್ಯಂತ ಶಿಸ್ತು ಬದ್ಧವಾದ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮಾಡುವ ನಿಟ್ಟಿನಲ್ಲಿ ಸಂಸ್ಥೆಯ ವಾಸವಿ ಯುವಜನ ಸಂಘದ ಅಧ್ಯಕ್ಷರಾದ ಶ್ರೀ ನಾಗೇಶ್, ಎಸ್.ಕೆ.ಪಿ.ಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸಂದೀಪ, ಜಿಲ್ಲಾ ಕಾರ್ಯಕಾರಿ ಸಮಿತಿ ಹಾಗೂ ನೂರಾರು ಕಾರ್ಯಕರ್ತರು ಶ್ರಮದಾನ ಮಾಡಿದ್ದು ವಿಶೇಷವಾಗಿತ್ತು.

ಮೈಸೂರು ನಗರದ ಪ್ರತಿಷ್ಠಿತ ಸಭಾಂಗಣ ಕರ್ನಾಟಕ ಕಲಾಮಂದಿರವನ್ನು ಮದುವಣಗಿತ್ತಿಯಂತೆ ಸಿಂಗರಿಸಲಾಗಿತ್ತು. ಸುಂದರವಾದ ಬೃಹತ್ ವೇದಿಕೆಯಲ್ಲಿ ಸರ್ವಾಲಂಕೃತಗೊಂಡ ಜಗನ್ಮಾತೆ ಶ್ರೀ ವಾಸವಿ ದೇವಿಯು ವಿರಾಜಮಾನಳಾಗಿ ಕಂಗೊಳಿಸುತ್ತಿದ್ದಳು. ಬೆಳಿಗ್ಗೆ 8.00 ಘಂಟೆಗೆ ಸುವಾಸನಿಯರ ಕನ್ನಿಕೆ ಪೂಜೆಯೊಂದಿಗೆ ಕಾರ್ಯಕ್ರಮಗಳಿಗೆ ಚಾಲನೆ ದೊರೆಯಿತು. ಜೊತೆ–ಜೊತೆಗೆ ಮಹಿಳಾ ತಂಡದವರಿಂದ ವಾಸವಿ ಮಹಾಯಂತ್ರ ಪಠಣವಾಗಿ ಎಲ್ಲೆಲ್ಲೂ ಸಕಾರಾತ್ಮಕವಾದ ಅಲೆಗಳು ಮೂಡಿಬಂದವು ನಂತರ ವೇದಿಕೆಯಲ್ಲಿ ಈ ಕೆಳಗಿನಂತೆ **ಸಾಂಸ್ಕೃತಿಕ ಕಾರ್ಯಕ್ರಮ** ನಡೆದವು

| ಕಾರ್ಯಕ್ರಮ | | ನೇತೃತ್ವ | ಕಾರ್ಯಕ್ರಮ | | ನೇತೃತ್ವ |
|---|---|---|---|---|---|
| ಕನ್ನಕೆ ಪೂಜೆ | > | ಕನ್ನಿಕಾ ಮೈತ್ರಿಕೂಟ ತಂಡ | ಕಂಸಾಳೆ | > | ಶ್ರೀಮತಿ ವಾಣಿ ಪ್ರಸಾದ್ |
| ವಾಸವಿ ಮಹಾಮಂತ್ರ | > | ವಾಸವಿ ವನಿತಾ ಟ್ರಸ್ಟ್ ತಂಡ | ರೆಟ್ರೊ ಹಾಡುಗಳು | > | ಶ್ರೀಮತಿ ರಾಧಾ ವಿನಯ್ |
| ತಂಬಿಟ್ಟಿನ ಆರತಿ | > | ವಿನುತ ರಘುರಾಂ, ಶಾರದಾ ಶಂಕರ್ | ಕಿಡ್ಸ್ ಡ್ಯಾನ್ಸ್ | > | ಶ್ರೀಮತಿ ಸುಷ್ಮಾ ಕಾರ್ತಿಕ್ |
| ಪ್ರಾರ್ಥನಾ ನೃತ್ಯರೂಪಕ | > | ಹಸನ್ಮುಖಿ ಸಂಗೀತ ಸುಧಾ ತಂಡ | ವೀಣಾ ವಾದನ | > | ಶ್ರೀಮತಿ ರಶ್ಮಿ ರಾಘವೇಂದ್ರ |
| ಮನೋರಂಜನಾ ನೃತ್ಯ | > | ಸ್ವರಾಣಾಲಯ ತಂಡ | ವೇದ ಘೋಷ | > | ಶ್ರೀಮತಿ ರಶ್ಮಿ ಆದೀಶ್ ಮತ್ತು ತಂಡ |
| ದೀಪದ ನೃತ್ಯ | > | ಶ್ರೀಮತಿ ಲಕ್ಷ್ಮಿ ದಿನೇಶ್ | ರಾಮಾಯಣದ ನೃತ್ಯರೂಪಕ | > | ಶ್ರೀಮತಿ ರಶ್ಮಿ ರಾಘವೇಂದ್ರ |
| ಸುಗ್ಗಿ ಕುಣಿತ | > | ಶ್ರೀಮತಿ ಗೌರವ್‌ಸುಧಾಮುರುಳಿ | ಮೈಸೂರು ಆಂಥಮ್ | > | ಸಾಯಿ ಪ್ರಣತಿ ಸಂಸ್ಥೆಯ ತಂಡ |
| ವೀರಗಾಸೆ ಮತ್ತು ಕರಗ | > | ಶ್ರೀಮತಿ ಕೀರ್ತಿ ರಮೇಶ್ | 500 ಕ್ಕೂ ಹೆಚ್ಚು ಮಹಿಳೆಯರಿಂದ ಶ್ಲೋಕ ಪಠನೆ | > | ಶ್ರೀಮತಿ ಸುರೇಖಾ ಹರೀಶ್, ರೂಪಾ ಅನಂತ್, ನಾಗವೇಣಿ, ಪ್ರವೀಣಾ ಅನಂತ್. |

ಆಹಾರ ಪ್ರಿಯರಿಗಾಗಿ ವಿಷೇಶ ಖಾದ್ಯಗಳಗೊಂಡ ವಿವಿಧ ಆಹಾರ ಮಳಿಗೆಗಳನ್ನು ತೆರೆಯಲಾಗಿತ್ತು. ಕಾರ್ಯಕ್ರಮದ ನೇತೃತ್ವವನ್ನು ಜಿಲ್ಲಾಧ್ಯಕ್ಷರಾದ ಶ್ರೀಯುತ ಆನಂದ್ ಕೃಷ್ಣ, ಕಾರ್ಯದರ್ಶಿಗಳಾದ ಶ್ರೀಮತಿ ರಶ್ಮಿ ರಾಘವೇಂದ್ರ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಅನಂತು ಹಾಗೂ ಶ್ರೀಮತಿ ಗೌರವ್ ಸುಧಾಮುರುಳಿ, ಯುವ ಪರಿಷತ್‌ನ ಹೆಚ್.ಎಂ. ಸಂದೀಪ್, ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಎಂ. ಬದರೀಶ್ ಹಾಗೂ ಹಲವಾರು ಕಾರ್ಯಕರ್ತರ ಸಹಕಾರದಿಂದ ಅತ್ಯಂತ ವಿಜೃಂಭಣೆಯಿಂದ ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯವಾಯಿತ್ತು. ಸದರಿ ಕಾರ್ಯಕ್ರಮದ ನೇರಪ್ರಸಾರವನ್ನು ಸುಮಾರು 7000ಕ್ಕೂ ಮೀರಿದ ಜನರು ವೀಕ್ಷಿಸಿದ್ದರೆ ಎಂಬುದೂ ಸಹ ಸಂತಸದ ವಿಷಯವಾಗಿದೆ.

ವಾಸವಿ ನಿಜಪಾದ ದರ್ಶನ, ಗುರುಗಳ ಶೋಭಾಯಾತ್ರೆ, ವಾಸವಿ ದಸರಾ, ಸಾಂಸ್ಕೃತಿಕ ವೈಭವ, 75ನೇ ಸ್ವಾತಂತ್ರ್ಯೋತ್ಸವ, ಕ್ರಿಕೆಟ್ ಪಂದ್ಯಾವಳಿಗಳನ್ನು ಯಶಸ್ವಿಯಾಗಿ ನೆರವೇರಿಸಿದ ಮೈಸೂರಿನ ಆರ್ಯವೈಶ್ಯ ಸಂಘಟನೆಗೆ 'ವಾಸವಿ ಭವನ'ದ ಉದ್ಘಾಟನಾ ಕಾರ್ಯಕ್ರಮವು ಮತ್ತೊಂದು ಮಣಿಮುಕುಟವಾಗಿದೆ.

ಒಟ್ಟಿನಲ್ಲಿ 'ಕರ್ನಾಟಕ ಆರ್ಯವೈಶ್ಯ ಮಹಾಸಭೆ'ಯ 'ವಾಸವಿ ಭವನ' ಲೋಕಾರ್ಪಣೆಯಾಗಿದ್ದು ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿಸುತ್ತೇವೆ.

ಇಂತಿ ನಿಮ್ಮವ
**ನಿಮಿಷಾಂಬಾಸುತ ನಾಗೇಶ**
ಅಧ್ಯಕ್ಷರು, ವಾಸವಿ ಯುವಜನ ಸಂಘ, ಮೈಸೂರು.




## ಮಾನ್ಯ ಸದಸ್ಯರೇ,

### ನಿಮ್ಮ ವಿಳಾಸದಲ್ಲಿ ಬದಲಾವಣೆ ಬೇಕೆ? ದೂರವಾಣಿ ಸಂಖ್ಯೆ ನಮೂದಿಸಬೇಕೆ? ಹಾಗಾದರೆ

### ನಿಮಗೊಂದು ಸುವರ್ಣಾವಕಾಶ

ತಾವು ಅಥವಾ ತಮ್ಮ ಸ್ನೇಹಿತರು/ಕುಟುಂಬ ವರ್ಗದವರು ಮಹಾಸಭೆ ಸದಸ್ಯರಾಗಿದ್ದು, ತಮಗೆ ಮಾಸಿಕ **ವಾರ್ತಾಪತ್ರ ಬರುತಿಲ್ಲವಾದರೆ, ವ್ಯಾಟ್ಸ್‌ಆ್ಯಪ್ ಮೂಲಕ ಮಾಹಿತಿಗಳು ದೊರೆಯುತ್ತಿಲ್ಲವಾದರೆ** ನಿಮ್ಮ ವಿಳಾಸದಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗಿದ್ದಲ್ಲಿ **ನಿಮಗೇ ಅವಕಾಶ ಮಾಡಿಕೊಡಲಾಗಿದೆ.** ನಿಮ್ಮ ಮೊಬೈಲ್ ಮೂಲಕವೇ, ನೀವು ಇರುವೆಡೆಯಿಂದಲೇ ಅವಶ್ಯಕ ಬದಲಾವಣೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ.

1. ಸದಸ್ಯತ್ವದ ಸಂದರ್ಭದಲ್ಲಿ ಮೊಬೈಲ್ ಸಂಖ್ಯೆ ನೀಡಿದ್ದರೆ ಬದಲಾವಣೆಗಳಿಗಾಗಿ ಈ ರೀತಿ ಮಾಡಿ

> Go to Google Chrome - Search for kavms.com in that select - Membership Button - select Update Address in that Type your respective Life Membership Number and Phone number then Submit.
Submit ಆದ ನಂತರ ನಿಮ್ಮ ರಿಜಿಸ್ಟರ್ ಮೊಬೈಲ್ ನಂಬರ್‌ಗೆ ಬಂದಿರುವಂತಹ OTPಯನ್ನು ENTER ಮಾಡಿ ನಿಮ್ಮ ವಿಳಾಸವನ್ನು ಬದಲಾಯಿಸಿಕೊಳ್ಳಬಹುದು

**ಅಥವಾ**

2. ಒಂದು ವೇಳೆ ನಿಮ್ಮ ಸದಸ್ಯತ್ವದೊಂದಿಗೆ ನಿಮ್ಮ ಮೊಬೈಲ್ ಸಂಖ್ಯೆ ಇಲ್ಲವಾದಲ್ಲಿ ಬದಲಾವಣೆಗಾಗಿ ಈ ರೀತಿ ಮಾಡಿ.

> Go to Google Chrome - Search for kavms.com in that select - Membership Button - select Download address update form Application ಅನ್ನು Download ಮಾಡಿಕೊಂಡು, Print ತೆಗೆದುಕೊಂಡು ಕೇಳಿರುವ ಮಾಹಿತಿಯನ್ನು ಬರೆದು ಮಹಾಸಭಾ Address ಗೆ ಪೋಸ್ಟ್ ಮೂಲಕ ಕಳುಹಿಸಿಕೊಡಲು ಕೋರಿದೆ.

13ನೇ ಪ್ರತಿಭೋತ್ಸವ 2023
ಈ ವರ್ಷದ ಪ್ರತಿಭೋತ್ಸವ ಕಾರ್ಯಕ್ರಮ > ತುಮಕೂರು ನಗರದಲ್ಲಿ
ಹೆಚ್ಚಿನ ಮಾಹಿತಿಗಳಿಗಾಗಿ ಮುಂದಿನ ಸಂಚಿಕೆಗಳನ್ನು ನಿರೀಕ್ಷಿಸಿ

ಹೆಚ್ಚಿನ ಮಾಹಿತಿಗಳಿಗಾಗಿ ಕರ್ನಾಟಕ ಆರ್ಯವೈಶ್ಯ ಮಹಾಸಭಾದ Social Media Page ಗಳನ್ನು visit ಮಾಡಿ
| Karnataka Aryavysya Mahasabha




ADTV

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ-ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು-09 ಫೋನ್: 22206151/22206152